ಶ್ರೀ ನಾಗಪ್ಪ ಸಾಲೋನಿ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ಕುಂಬಾರ ಕೊಪ್ಪಲಿನಲ್ಲಿ ಕ್ರೀಡಾಂಗಣ ಅಭಿವೃದ್ಧಿಗಾಗಿ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಗ್ರಾಮ ಅರಣ್ಯ ಸಮಿತಿಗಳಿಗೆ ಸಂಬಂಧಿಸಿದ ಜಂಟಿ ಅರಣ್ಯ ಯೋಜನೆಗೆ ತಿದ್ದುಪಡಿ.

2921:(3910)

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ ಅರಣ್ಯ ಸಮಿತಿಗಳಿಗೆ ಸಂಬಂಧಿಸಿದ ಜಂಟಿ ಅರಣ್ಯ ಯೋಜನೆಗೆ ತಿದ್ದುಪಡಿ (ಕಾಯಿದೆಯಲ್ಲಿ) ತರುವ ಉದ್ದೇಶ ಸರ್ಕಾರದಲ್ಲಿದೆಯೇ?

ಆ) ಇದ್ದಲ್ಲಿ ಅರಣ್ಯ ಸಮಿತಿಗಳಿಗೆ ಹೆಚ್ಚು ಅಧಿಕಾರ ನೀಡಲಾಗುವುದೇ?

ಇ) ಗ್ರಾಮ ಅರಣ್ಯ ಸಮಿತಿಯ ಕಾರ್ಯದರ್ಶಿ ಹುದ್ದೆಗೆ ಗ್ರಾಮದ ಜನರನ್ನೆ ನೇಮಿಸುವಂತೆ ತಿದ್ದುಪಡಿ ಮಾಡಲಾಗುವುದೇ?

ಶ್ರೀ ಡಿ.ಮಂಜುನಾಥ (ಅರಣ್ಯ ಸಚಿವರು):

ಅ) ಜಂಟಿ ಅರಣ್ಯ ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸುವ ಮೂಲಕ ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಲು ಕರ್ನಾಟಕ ಅರಣ್ಯ ಕಾಯ್ದೆ 1963ಕ್ಕೆ ಕಲಂ 31ಎ ನ್ನು ಸೇರಿಸುವ ಮೂಲಕ ಈಗಾಗಲೇ ತಿದ್ದುಪಡಿಯನ್ನು ಮಾಡಿದ್ದು ದಿನಾಂಕ 11-5-98ರ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ಆ) ಮೇಲ್ಕಂಡ ಕಾಯ್ದೆಯಡಿಯಲ್ಲಿ ನಿಯಮಗಳನ್ನು ರೂಪಿಸುವ ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಇ) ಅದೇ.

ಶರಾವತಿ ಟೇಲ್‌ರೇಸ್ ಯೋಜನೆಗೆ ಮಂಜೂರಾದ ಭೂಮಿ.

2922:(3911)

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶರಾವತಿ ಟೇಲ್‌ರೇಸ್ ಯೋಜನೆಗೆ ಈಗಾಗಲೇ ನಿರ್ವನೀಕರಣ ಮಾಡಿದ ಅರಣ್ಯ ಭೂಮಿಯ ವಿಸ್ತೀರ್ಣ ಎಷ್ಟು?

ಆ) ಇನ್ನೂ ನಿರ್ವನೀಕರಣ ಮಾಡಬೇಕಾಗಿರುವ ಅಂದಾಜು ಭೂಮಿಯ ವಿಸ್ತೀರ್ಣ ಎಷ್ಟು?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

ಅ) ಶರಾವತಿ ಟೇಲ್‌ರೇಸ್ ಯೋಜನೆಯಡಿಯಲ್ಲಿ ಇದುವರೆಗೂ 307.85 ಹೆಕ್ಟೇರ್ ಅರಣ್ಯ ಭೂಮಿಯಲ್ಲಿ ಮರಗಳ ಕಡಿತಲೆ ಕಾರ್ಯ ಕೈಗೊಂಡಿರುತ್ತದೆ.

ಆ) ಶರಾವತಿ ಟೇಲ್‌ರೇಸ್ ಯೋಜನೆಯಲ್ಲಿ ಒಟ್ಟು 700 ಹೆಕ್ಟೇರು ಅರಣ್ಯ ಭೂಮಿ ಬಿಡುಗಡೆಯಾಗಿದ್ದು ಇನ್ನೂ ಅಂದಾಜು 329.15 ಹೆಕ್ಟೇರು ಪ್ರದೇಶದಲ್ಲಿ ಮರಗಳ ಕಡಿತಲೆ ಕಾರ್ಯ ಕೈಗೊಳ್ಳಬೇಕಾಗಿದೆ.

ಕಾಗದ ಕಾರ್ಖಾನೆಗೆ ಬೇಕಾದ ನೀಲಗಿರಿ ನೆಡುತೋಪು

2923:(3908)

ಶ್ರೀ ಬಿ.ಎಸ್. ಯಡಿಯೂರಪ್ಪ, (ಶಿಕಾರಿಪುರ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಗದ ಕಾರ್ಖಾನೆಗೆ ಬೇಕಾದ ನೀಲಗಿರಿ ನೆಡುತೋಪು ಬೆಳೆಸಲು ಅರಣ್ಯ ನಾಶಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಶಿವಮೊಗ್ಗ ಜಿಲ್ಲೆಯಲ್ಲಿ ನಾಶ ಮಾಡಲಾದ ಅರಣ್ಯ ಜಮೀನಿನ ವಿಸ್ತೀರ್ಣವೆಷ್ಟು, ಆ ಪ್ರದೇಶಗಳು ಯಾವುವು ಹಾಗೂ ಈ ರೀತಿ ಅರಣ್ಯ ನಾಶ ಮಾಡಲು ನಿರ್ಧಾರ ತೆಗೆದುಕೊಂಡಿರುವುದರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

ಅ) ಮೈ: ಎಂ.ಪಿ.ಎಂ. ಸಂಸ್ಥೆಯವರು ಅವರಿಗೆ ನೀಡಲಾದ ಕ್ಷೀಣತ ಅರಣ್ಯ ಪ್ರದೇಶ ಸಿ ಮತ್ತು ಡಿ ವರ್ಗದ ಪ್ರದೇಶಗಳನ್ನು ಸ್ವಾಭಾವಿಕ ಸಸ್ಯ ಸಂಕುಲಕ್ಕೆ ಹಾನಿಯಾಗದಂತೆ ಅರಣ್ಯೀಕರಣ ಕಾರ್ಯಕ್ಕೆ ಮಾತ್ರ ಉಪಯೋಗಿಸಿರುತ್ತಾರೆ.